ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ದಿನಾಂಕ ೨೬ನೇ ಜೂನ್ ೧೯೮೮ ಜೇಷ್ಠ ೧೨, ೧೯೧೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಕಬ್ಬಿನ ಬೆಲೆ ಪಾವತಿ ಮಾಡುವುದು

೨೫೦೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) -ಮಾನ್ಯ ಬಂದರು ಮತ್ತು ಏಣಿನುಗಾರಿಕೆ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೇ ?

ಅ) ಕಬ್ಬನ್ನು ನುರಿಸಿದ ಹಂಗಾಮು ಮುಗಿದ ಮೇಲೆ ಪೂರೈಸಿದ ಕಬ್ಬಿಗೆ ಎರಡನೇ ಕಂತಿನ ಬಿಲ್ಲನ್ನು ಎರಡು ತಿಂಗಳ ಒಳಗಾಗಿ ಕೊಡುವ ಬಗ್ಗೆ ಕಾರ್ಖಾನೆಗಳಿಗಿರುವ ಕೊಂದರೆಯೇನು ?

ಆ) ಕಾರ್ಖಾನೆಗೆ ಪೂರೈಸಿದ ಕಬ್ಬಿನ ಬಿಲ್ಲಿನ ಕೊನೆಯ ಕಂತನ್ನು ಮುರು ವರ್ಷ ಕಾರ್ಖಾನೆ ಪ್ರಾರಂಭವಾಗುವ ಮುನ್ನ ಕಡ್ಡಾಯವಾಗಿ ಕೊಡುವಂತೆ ಸರ್ಕಾರ ಆದೇಶ ನೀಡಲು ಹಿಂಜರಿಯುತ್ತಿರುವುದಕ್ಕೆ ಕಾರಣವೇನು ?

ಇ) ಕೂಡಲೇ ಈ ಬಗ್ಗೆ ಸೂಕ್ತ ಹಾಗೂ ನಿರ್ದಿಷ್ಟ ಆದೇಶ ಹೊರಡಿಸಲಾಗುವುದೇ ?

ಶ್ರೀ ಜೆ.ಹೆಚ್.ಪಟೇಲ್ (ಬಂದರು ಮತ್ತು ಏಣಿನುಗಾರಿಕೆ ಹಾಗೂ ಸಣ್ಣಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು).—

ಅ) ರಾಜ್ಯದ ನಿಗಧಿತ ಬೆಲೆಯನ್ನು ಎಲ್ಲಾ ಸಕ್ಕರೆ ಕಾರ್ಖಾನೆಗಳು ಕೊಡಬೇಕಾಗಿದೆ. ಇದರ ಜೊತೆಗೆ ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಕೊಡಲಾಗುತ್ತಿದೆ. ಎರಡು, ಮೂರು ಕಂತುಗಳಲ್ಲಿ ಕಾರ್ಖಾನೆಗಳಿಗೆ ಕಬ್ಬನ್ನು ಒದಗಿಸುವ ರೈತರಿಗೆ ಮುಂಗಡ ಹಣವಾಗಿ ರಾಜ್ಯದ ನಿಗಧಿತ ಬೆಲೆಗಿಂತ ಹೆಚ್ಚಿಗೆ ಕೊಡಲಾಗುತ್ತಿದೆ. ಮುಂಗಡ ಹಣವಾಗಿ ಮೊದಲನೇ ಕಂತನ್ನು ಕಬ್ಬು ಅರೆಯುವ ಕಾಲ ಪ್ರಾರಂಭಕ್ಕೆ ಮುನ್ನ ಕೊಡಲೇಬೇಕಾಗಿದೆ. ನುತ್ತು ಎರಡನೇ ಕಂತಿನ ಹಣವನ್ನು ಮುಂದಿನ ಅರೆಯುವ ಕಾಲ ಪ್ರಾರಂಭದಲ್ಲೇ ಕೊಡಬೇಕಾಗಿದೆ. ಸರ್ಕಾರವು ನಿರ್ದಿಷ್ಟಪಡಿಸಿರುವ ಪ್ರಕಾರ ೧೪ ದಿನದೊಳಗೆ ಕಾರ್ಖಾನೆಯವರು ಕಬ್ಬಿನ ಬೆಲೆಯನ್ನು ಕೊಡಬೇಕು.

ಆ) ಕಾರ್ಖಾನೆಯ ಲೆಕ್ಕಪತ್ರದ ತನಿಖಾ ವರದಿ ಮುಗಿದ ತಕ್ಷಣವೇ ಕೊನೆಯ ಕಂತಿನ ಹಣವನ್ನು ಕೊಡಬೇಕಾಗುತ್ತದೆ. ಲೆಕ್ಕಪತ್ರದ ತನಿಖಾ ವರದಿಯು ವಿಳಂಬವಾದಲ್ಲಿ ಮೂರನೇ ಕಂತಿನ ಹಣ ಕೊಡುವುದರಲ್ಲಿ ವಿಳಂಬವಾಗುತ್ತದೆ. ಆದರೆ ೧೪ ದಿವಸದಲ್ಲೇ ಕಬ್ಬಿನ ಬೆಲೆಯನ್ನು ನಿಯಮದ ಪ್ರಕಾರ ಕಂಪನಿಯವರು ಕೊಡಬೇಕಾಗುತ್ತದೆ. ಈ ಬಗ್ಗೆ ಆಗಿಂದಾಗ್ಗೆ ಸೂಚನೆಗಳನ್ನು ಕೊಡಲಾಗುತ್ತಿದೆ. ಸಕ್ಕರೆ ಕಾರ್ಖಾನೆಗಳಿಗೆ ಈ ನಿಯಮವನ್ನು ತಪ್ಪದೇ ಅನುಸರಿಸಬೇಕೆಂದು ತಿಳಿಸಲಾಗಿದೆ.

ಇ) ಸಕ್ಕರೆ ನಿರ್ದೇಶನಾಲಯವು ಈಗಾಗಲೇ ಕರಾರುವಾಕ್ಕಾಗಿ ಕಬ್ಬಿನ ಬೆಲೆಯನ್ನು ಬಾಕಿಯನ್ನು ಕೂಡಲೇ ಕೊಡಬೇಕೆಂದು ಆದೇಶ ನೀಡಲಾಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ನನ್ನ ತಿಳಿವಳಿಕೆಯ ಪ್ರಕಾರ ಮಾನ್ಯ ಮಂತ್ರಿಗಳು ಈ ವಿಷಯವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿಲ್ಲವೆಂದು ಕಾಣುತ್ತದೆ. ಆದ್ದರಿಂದ ಈ ರೀತಿ ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಎಲ್ಲಿ ಕಬ್ಬು ಪೂರೈಕೆ ಮಾಡುತ್ತಾರೆ ಅಲ್ಲಿ ಎರಡು ತಿಂಗಳಾದರೂ ಬೆಳೆಗಾರರಿಗೆ ಬಿಲ್‌ನ ಹಣವನ್ನು ಸರಿಯಾಗಿ ಕೊಡುತ್ತಿಲ್ಲ ಕೆಲವೊಂದು ಕಾರ್ಖಾನೆಯಲ್ಲಿ ೬-೭ ತಿಂಗಳಾದರೂ ಎರಡನೇ ಕಂತನ್ನು ಕೊಟ್ಟಿಲ್ಲ. ಇದರಿಂದ ರೈತರು ಸಾಲವನ್ನು ತಂದಿಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ. ಕೆಲವೊಂದು ಸ್ವಂತವಾಗಿ ಮಾಡುವಂಥ ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ಕೊಡುತ್ತಿವೆ. ಬೇರೆ ಬೇರೆ ಕಾರ್ಖಾನೆಗಳು ಬೇರೆ ಬೇರೆ ರೀತಿಯಲ್ಲಿ ಬಿಲ್ಲನ್ನು ಕೊಡುತ್ತಿರುವುದರಿಂದ ರೈತನ ಮೇಲೆ ಹೊರೆಬೀಳುತ್ತಿದೆ. ರಾಜ್ಯದಲ್ಲಿರುವ ಎಲ್ಲಾ ಕಾರ್ಖಾನೆಗಳಿಗೂ ಸಮಗ್ರವಾದ ರೀತಿಯಲ್ಲಿ ಬಿಲ್ಲನ್ನು ಪಾವತಿಮಾಡುವಂಥ ವ್ಯವಸ್ಥೆಯನ್ನು ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಕೊನೆಯದಾಗಿ ೧೪ ದಿನಗಳಲ್ಲಿ ಕಬ್ಬಿನ ಬೆಲೆಯನ್ನು ನಿಯಮದ ಪ್ರಕಾರ ಕೊಡಬೇಕೆಂದು ಆದೇಶ ಇದೆ ಎಂದು ಹೇಳುತ್ತಿದ್ದೀರಿ, ಆ ಪ್ರಕಾರ ಕೊಡದಿರತಕ್ಕಂಥ ಎಷ್ಟು ಕಾರ್ಖಾನೆಗಳು ರಾಜ್ಯದಲ್ಲಿವೆ? ಅದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಸಕ್ಕರೆ ಕಾರ್ಖಾನೆಗಳು ೩ ವಲಯಗಳಲ್ಲಿವೆ. ಸರ್ಕಾರಿ, ಸಹಕಾರಿ ಮತ್ತು ಸಾಹುಕಾರಿ ವಲಯಗಳಲ್ಲಿ, ಈ ಮೂರು ವಲಯಗಳಿಗೆ ಬೇರೆ ಬೇರೆ ಕಾನೂನು ಲಘುವಾಗುತ್ತದೆ. ಜಾಯಿಂಟ್ ಸೆಕ್ಟಾರ್‌ಗೆ ಲಿಮಿಟೆಡ್ ಕಂಪನಿ ಲಾ ಲಘುವಾಗುತ್ತದೆ. ನಮ್ಮ ರಾಜ್ಯ ಸರ್ಕಾರಕ್ಕೆ ಇರತಕ್ಕ ಇತಿಮಿತಿಗಳು ಏನಿವೆ ಅವನ್ನು ಮಾನ್ಯ ಸದಸ್ಯರು ಅರಿತ್ತಿದ್ದಾರೆಂದು ಭಾವಿಸುತ್ತೇನೆ ಏಕೆಂದರೆ ಅವರು ಬಿಳ್ಳಿಯ ಸಕ್ಕರೆ ಕಾರ್ಖಾನೆ ಇರತಕ್ಕ ಪ್ರದೇಶದಿಂದ ಬಂದಿರತಕ್ಕ ಪ್ರತಿನಿಧಿಗಳು. ಕೇಂದ್ರ ಸರ್ಕಾರ ಪ್ರತಿ ವರ್ಷ ಒಂದು ಪ್ರೈಸನ್ನು ಗೊತ್ತು ಮಾಡುತ್ತದೆ. ೮.೫ ರೆಕವರಿಗೆ ಎಷ್ಟು ಹಣ ಕೊಡಬೇಕೆಂದು ಮಾಡುತ್ತದೆ, ಆದರೆ ನಾವು ಅಷ್ಟು ಹಣವನ್ನು ಕೊಟ್ಟು ತೆಗೆದುಕೊಳ್ಳುವುದಕ್ಕೆ ಹೋದರೆ ಯಾವ ಕಾರ್ಖಾನೆಗೂ ಕಬ್ಬು ಸಿಗುವುದಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸ್ಟೇಟ್ ಅಡ್ವೈಸರಿ ಪ್ರೈಸ್‌ನ್ನು ಗೊತ್ತು ಮಾಡಿದೆ. ಕಳೆದ ವರ್ಷ ೨೦೫ಕ್ಕೆ ೮.೫ ರೆಕವರಿ ಮಾಡಿದ್ದೇವೆ ತಮ್ಮ ಕ್ಷೇತ್ರದಲ್ಲಿ ಕೂಡ ಸಕ್ಕರೆ ಕಾರ್ಖಾನೆ ಇದೆ. ಆ ಕಾರ್ಖಾನೆಗೆ ಬೇಕಾಗುವ ಕಬ್ಬು ಸರಬರಾಜು ಇಲ್ಲ, ಹೀಗಾಗಿ ಲಾಭ ಇಲ್ಲ. ರೈತರಿಗೆ ೨೫೦ ರೂಪಾಯಿನಂತೆ ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ ಆದ್ದರಿಂದ ಸಕ್ಕರೆ ಉದ್ಯಮದಲ್ಲಿ ಬಹಳ ಸಂಕ್ಲಿಷ್ಟವಾದ ಪರಿಸ್ಥಿತಿ ಇದೆ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿರತಕ್ಕ ಕಾರ್ಖಾನೆಗಳು ಬಹಳ ಕೆಟ್ಟ ಸ್ಥಿತಿಯಲ್ಲಿದ್ದು ಈ ಎರಡು ವರ್ಷದಿಂದ ೮-೯ ಕಾರ್ಖಾನೆಗಳು ಸ್ವಲ್ಪ ಮಟ್ಟಿಗೆ ಲಾಭ ಮಾಡಿವೆ. ಅವರ ಕ್ಷೇತ್ರದಲ್ಲಿರತಕ್ಕ ಸಂಕೇಶ್ವರ ಸಕ್ಕರೆ ಕಾರ್ಖಾನೆ ಏನಿದೆ ಅದು ಎಕ್ಸೆಪ್ಷನಲ್ ಇನ್‌ಸ್ಟಿಟ್ಯೂಷನ್. ಅದು ಇಡೀ ಭಾರತ ದೇಶದಲ್ಲೇ ಬಹಳಷ್ಟು ಚೆನ್ನಾಗಿ ನಡೆಯತಕ್ಕ ಕಾರ್ಖಾನೆ ಆದ್ದರಿಂದ ಯಾರಾದರೂ ಸ್ಟೇಟ್ ಅಡ್ವೈಸರಿ ಪ್ರೈಸ್‌ಗಿಂತ ಜಾಸ್ತಿ ಕೊಡುವುದಕ್ಕೆ ತಯಾರಿದ್ದರೆ ಟ್ರಾನ್ಸ್‌ಪೋರ್ಟೇಷನ್ ಅಂಡ್ ಕಟಿಂಗ್ ಚಾರ್ಜಸ್ ಎಂದು ಕೊಡಿ ಎಂದು ಹೇಳಿದ್ದೇವೆ. ಮಂಡ್ಯದವರು ೨೮೦ ರೂಪಾಯಿ ಎಂದು ಅನೌನ್ಸ್ ಮಾಡುತ್ತಾರೆ. ಇನ್ನೊಂದು ಕಾರ್ಖಾನೆ ಹತ್ತು ರೂಪಾಯಿ ಕೂಡ ಜಾಸ್ತಿ ಕೊಡುವ ಸ್ಥಿತಿಯಲ್ಲಿರುವುದಿಲ್ಲ. ನನಗೆ ಸಮಸ್ಯೆ ಅರ್ಥವಾಗಿಲ್ಲವೆಂದರೆ ತಿಳಿದುಕೊಳ್ಳುವುದಕ್ಕೆ ತಯಾರಿದ್ದೇನೆ. ನಾನು ಕೂಡ ಸಕ್ಕರೆ ಕಾರ್ಖಾನೆಯ ಏರಿಯಾದಿಂದ ಬಂದಿರತಕ್ಕವನು ಆದ್ದರಿಂದ ರೈತರಿಗೆ ಬಾಕಿ ಕೊಡಬೇಕಾಗಿರತಕ್ಕ ಕೆಲವು ಸಕ್ಕರೆ ಕಾರ್ಖಾನೆಗಳು ರೋಗಗ್ರಸ್ಥವಾಗಿವೆ. ರೈತರ ಹಣ ಕೊಡಬೇಕೆಂದು ಆದೇಶ ಕೊಡಬಹುದು. ಅದಕ್ಕೆ ಸರ್ಕಾರದವರು ಸಾಲ ಕೊಡಿ ಎನ್ನುತ್ತಾರೆ. ಇವತ್ತಿನ ದಿವಸ ಸುಮಾರು ೧೪ ಕೋಟಿ ರೂಪಾಯಿ ಹಣ ಕಾರ್ಖಾನೆಗಳಿಂದ ರೈತರಿಗೆ ಹೋಗುವುದು ಇದೆ. ಅದರಲ್ಲಿ ಚೆನ್ನಾಗಿ ನಡೆಯತಕ್ಕ ಕಾರ್ಖಾನೆಗಳವರು ಪೇಮೆಂಟ್ ಚೆನ್ನಾಗಿ ಮಾಡುತ್ತಾರೆ ಒಂದೇ ಏರಿಯಾದಲ್ಲಿ ೨-೩ ಕಾರ್ಖಾನೆಗಳಿದ್ದರೆ ಯಾರು ಪ್ರಾಮಾಣಿಕವಾಗಿ ಪೇಮೆಂಟ್ ಮಾಡುತ್ತಾರೆ ಅಂಥ ಕಡೆ ರೈತರು ಹೋಗುತ್ತಾರೆ. ನನಗೆ ತಿಳಿದಿರುವ ಮಟ್ಟಿಗೆ ಬಾಕಿ ಕೊಡುತಕ್ಕ ಶಕ್ತಿ ಇರತಕ್ಕ ಕಾರ್ಖಾನೆಗಳಿಗೆ ರೈತರ ಹಣ ಕೊಡಬೇಕೆಂದು ನೋಟೀಸ್ ಕೊಡಲಾಗಿದೆ ಇದಕ್ಕಿಂತ ಹೆಚ್ಚಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಒಂದು ಸಚಿವರ ಮನಸ್ಸಿಗೆ ನೋವಾಗಿದ್ದರೆ ಆ ರೀತಿ ಭಾವಿಸಬಾರದೆಂದು ವಿನಂತಿ. ನಾನು ಆ ರೀತಿ ಮಾತನಾಡಿಲ್ಲ ತಾವು ಕಾರ್ಖಾನೆಯ ಲೆಕ್ಕಪತ್ರ ತನಿಖೆ

ವರದಿ ಮುಂಗಿದಮೇಲೆ ಈ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಹೇಳಿದಿರಿ. ತನಿಖಾ ವರದಿಯನ್ನು ಬೇಗನೆ ಮುಂಗಿಸುವುದಕ್ಕೆ ಯಾವ ಕಾರ್ಯಕ್ರಮ ಕೈಗೊಳ್ಳುತ್ತೀರಿ? ಕಾರ್ಖಾನೆಯವರು ಬೇರೆ ಬೇರೆ ಪ್ರದೇಶದಿಂದ ಕಬ್ಬನ್ನು ತರುತ್ತಾರೆ ಮತ್ತು ಎಲ್ಲಿ ಪ್ರಾಮಾಣಿಕವಾಗಿ ಪೇಮೆಂಟ್ ಮಾಡುತ್ತಾರೆ ಅಲ್ಲಿ ಕಬ್ಬು ಹೋಗುತ್ತದೆಂದು ಹೇಳಿದಿರಿ. ಅದನ್ನು ನೀವು ಬ್ಯಾನ್ ಮಾಡಬೇಕು ಯಾವ ಏರಿಯಾದಲ್ಲಿ ಕಬ್ಬು ಇರುತ್ತದೋ ಅಲ್ಲೇ ಕಬ್ಬನ್ನು ನುರಿಸತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳಬೇಕು. ಬೇರೆ ಪ್ರದೇಶದಿಂದ ಕಬ್ಬು ಬಂದರೆ ಚೆನ್ನಾಗಿರುವುದಿಲ್ಲ. ಕಾರ್ಖಾನೆ ಮೇಲೆ ಪರಿಣಾಮ ಬೀರತಕ್ಕ, ಪ್ರಭಾವ ಬೀರತಕ್ಕ ಕಾರ್ಯಕ್ರಮಗಳು ನಡೆಯುತ್ತವೆ. ಆದ್ದರಿಂದ ಸರ್ಕಾರದಲ್ಲಿ ವಿನಂತಿಸುತ್ತೇನೆ, ಕಬ್ಬು ಪೂರೈಕೆ ಆದಕೂಡಲೇ ಸೀಜನ್ ಮುಗಿದ ಮೇಲೆ ೨ ತಿಂಗಳೊಳಗೆ ೨ನೇ ಕಂತನ್ನು ಕೊಡತಕ್ಕ ಕಾರ್ಯಕ್ರಮ ಮಾಡಬೇಕು ಬರುವ ವರ್ಷ ಕಾರ್ಖಾನೆಯನ್ನು ಪ್ರಾರಂಭಿಸುವುದಕ್ಕೆ ಮಂಜಿಚೆ ಮೊದಲ ವರ್ಷ ಪೂರೈಸಿದ ಕಬ್ಬಿನ ಬೆಲೆಯನ್ನು ಸಂಪೂರ್ಣವಾಗಿ ಪೇಮೆಂಟ್ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದ ನೀತಿ ಏನು ?

ಶ್ರೀ ಜೆ. ಹೆಚ್. ಪಟೇಲ್.—ಇಲ್ಲಿ ಎರಡು ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಆಗುವುದು ಹೊರಗಡೆಯಿಂದಲೂ ಬರುತ್ತದೆ. ನಮ್ಮ ಕಬ್ಬು ಹೊರಗಡೆಯೂ ಹೋಗುತ್ತದೆ, ಅದು ನಿಜ. ಹೊರಗಡೆ ಹೋಗುವುದನ್ನು ನಾವು ಬ್ಯಾನ್ ಮಾಡುವುದಕ್ಕಾಗುವುದಿಲ್ಲ. ಮಂಡ್ಯದಲ್ಲಿ ಕಳೆದ ಸೀಸನ್‌ನಲ್ಲಿ ಮೂರು ಕಾರ್ಖಾನೆಗಳಿಗೆ ಬೇಕಾದಷ್ಟಕ್ಕಿಂತ ಹೆಚ್ಚು ಕಬ್ಬು ಆಯಿತು. ಆಗ ರೈತರು ಒತ್ತಾಯ ಮಾಡಿದರು. ತಮಿಳುನಾಡಿನ ಸಕ್ಕರೆ ಕಾರ್ಖಾನೆಯವರು ಕಬ್ಬು ತೆಗೆದುಕೊಳ್ಳುತ್ತಾರೆ. ಇಲ್ಲಿ ಕಾರ್ಖಾನೆಗಳಿಗೆ ಕಬ್ಬು ಅರೆಯಿಸುವುದಕ್ಕೆ ಶಕ್ತಿ ಇಲ್ಲ. ನಮ್ಮ ಕಬ್ಬು ಒಣಗಿಹೋಗುತ್ತದೆ. ಆದ್ದರಿಂದ ನಮಗೆ ತಮಿಳುನಾಡಿಗೆ ಕೊಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಿದರು. ಅನಿವಾರ್ಯವಾಗಿ ನಾವು ಕೊಡಬೇಕಾಯಿತು. ಹಾಗೆಯೇ ಮಾನ್ಯ ಸದಸ್ಯರ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಕಬ್ಬು ಹೋಗುತ್ತಿದೆ. ನಾವು ಅದನ್ನು ಬ್ಯಾನ್ ಮಾಡುವುದಕ್ಕಾಗುವುದಿಲ್ಲ. ಆದರೆ ನಮ್ಮ ಕಾರ್ಖಾನೆಗಳ ಕೆಪಾಸಿಟಿಗೆ ಬೇಕಾಗುವಷ್ಟು ಕಬ್ಬನ್ನು ಕಡ್ಡಾಯವಾಗಿ ಸಪ್ಲೈ ಮಾಡಬೇಕು ಎಂದು ಹೇಳುತ್ತಿದ್ದೇವೆ. ನಮ್ಮ ಕಾರ್ಖಾನೆಯನ್ನು ಒಣಗಿಸಿ ಬೇರೆ ಕಡೆ ಕೊಡುವುದಿಲ್ಲ. ನಮ್ಮ ರಾಜ್ಯದಲ್ಲಿರತಕ್ಕ ಕಾರ್ಖಾನೆಗಳು ಬೇರೆ ಕಡೆಯಿಂದ ಕಬ್ಬು ತಂದು ಅರೆಯುತ್ತಿಲ್ಲ.ಏಕೆಂದರೆ ನಾವೇ ಹೆಚ್ಚು ಕೊಡುತ್ತಿದ್ದೇವೆ. ನಮ್ಮ ಕಾರ್ಖಾನೆಗಳಿಗೆ ಸಾಕಷ್ಟು ಕಬ್ಬು ಬರುತ್ತದೆ. ಅದು ಬೇರೆ ಕಡೆ ಹೋಗುವುದಕ್ಕೆ ಅವಕಾಶ ಕೊಟ್ಟಿಲ್ಲ. ರೈತರು, ರೈತ ಮುಖಂಡರು, ಶಾಸಕರು ನಮ್ಮ ಕಬ್ಬು ಒಣಗಿ ಹೋಗುತ್ತದೆ ಹೊರಗಡೆ ಕೊಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದಾಗ ಸರ್ಕಾರ ಬೇರೆಯವರಿಗೆ ತೆಗೆದುಕೊಂಡು ಹೋಗುವುದಕ್ಕೆ ಪರ್ಮಿಷನ್ ಕೊಟ್ಟಿದೆ. ಕಬ್ಬು ಅರೆಯುವುದು ಮುಗಿದಮೇಲೆ ರೈತರಿಗೆ ಕೊಡಬೇಕಾದಬಾಕಿ ಚುಕ್ತ ಆಗಬೇಕು, ಬಾಕಿ ಉಳಿಯಂಬಾರದು ಎಂದು ಹೇಳಿದ್ದಾರೆ. ಅದನ್ನು ಆದಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ,

ಅಧ್ಯಕ್ಷರು.—ಮುಂದಿನ ಪ್ರಶ್ನೆ ಫರ್ನಾಂಡಿಸ್ ಅವರದು. ಅವರು ಆಬ್ಸೆಂಟ್ ಆಗಿದ್ದಾರೆ.

SRI J. A. FERNANDES.—sir, I am present.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಮುಂದೆ ಹೋಗಿದೆ. ಟೈಂ ಕೇಳಿದ್ದಾರೆ.

SRI J. A. FERNANDES.—My question has been incorrectly framed.

SRI. J. H. PATEL.—I have requested for time because of the natureof the question.

SRI J. A. FERNANDES.—My question has been incorrectly framed.

MR. SPEAKER.—He has asked for time. I have given him time.